**ಎಂ.ವಿ.ಸಿ.95/2025, ಪಿ.ಡಬ್ಲೂ-1 ಹೆಸರುಃ ಭಾಗ್ಯಮ್ಮ**

**ದಿಃ17-12-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಪಿ.ಆರ್.ಎಲ್ ವಕೀಲರಿಂದಃ**

ನಾನು ನನ್ನ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಇದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತದೆ. ಪ್ರಮಾಣ ಪತ್ರದಲ್ಲಿ ಇರುವ ಸಹಿಗಳು ನನ್ನದೇ ಆಗಿರುತ್ತದೆ.

ಚಿತ್ರಹಳ್ಳಿ ಗೇಟ್ ಪೊಲೀಸ್ ಠಾಣೆಯ ಠಾಣಾ ಮೊಕದ್ದಮೆ ಸಂಖ್ಯೆ 167/2024 ರ ದೂರು, ಪ್ರ.ವ. ವರದಿ, ಮಹಜರ್, ವಾಹನ ಅಮಾನತ್ತು ಪಂಚನಾಮೆ, ವಾಹನ ತಪಾಸಣಾ ವರದಿ, ಶವ ತನಿಖಾ ವರದಿ, ಶವ ಪರೀಕ್ಷಾ ವರದಿ ಮತ್ತು ದೋಷಾರೋಪಣ ಪಟ್ಟಿಯ ದೃಡೀಕೃತ ನಕಲುಗಳನ್ನು ಹಾಜರುಪಡಿಸಿದ್ದು, ನಿಪಿ-1 ರಿಂದ 8 ಎಂದು ಗುರುತಿಸಲಾಯಿತು. ನನ್ನ ಮೃತ ಪತಿಗೆ ಸಂಬಂಧಿಸಿದ ಆಧಾರ್ ಕಾರ್ಡನ್ನು ಹಾಜರುಪಡಿಸಿದ್ದು, ನಿಪಿ-9 ಎಂದು ಗುರುತಿಸಲಾಯಿತು. ನನ್ನ ಮಾವನವರ ಹೆಸರಿನಲ್ಲಿ ಟಿ ನುಲೇನೂರು ಗ್ರಾಮದಲ್ಲಿರುವ ಜಮೀನಿನ ಪಹಣಿಯನ್ನು ಹಾಜರುಪಡಿಸಿದ್ದು, ನಿಪಿ-10 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರಃ ಶ್ರೀ ಪಿ.ಎನ್ ವಕೀಲರಿಂದಃ**

ಅಪಘಾತವನ್ನು ನಾನು ಪ್ರತ್ಯಕ್ಷವಾಗಿ ನೋಡಿಲ್ಲ ಎಂದರೆ ಸರಿ. ಅಪಘಾತದ ಸಮಯದಲ್ಲಿ ನಾನು ಮನೆಯಲ್ಲಿದ್ದೆನು. ಅಪಘಾತ ಯಾವ ರೀತಿ ಆಯಿತು ಎಂದು ನಂತರ ತಿಳಿದುಕೊಂಡಿರುತ್ತೇನೆ. ನನ್ನ ಮೃತ ಪತಿ ದೇವಸ್ಥಾನಕ್ಕೆ ಹೋಗಿ ಹಿಂದಿರುಗಿ ಬರುವಾಗ, ಹಿಂದಿನಿಂದ ಬಂದು ವ್ಯಾನ್ ಡಿಕ್ಕಿಪಡಿಸಿದ ಪರಿಣಾಮ ಅಪಘಾತವಾಗಿರುತ್ತದೆ. ಅಪಘಾತದ ಸಮಯದಲ್ಲಿ ನನ್ನ ಮೃತ ಪತಿ ಬೈಕಿನಲ್ಲಿ ಹೋಗುತ್ತಿದ್ದರು. ಸದರಿ ಬೈಕು ನನ್ನ ಮೃತ ಪತಿಗೆ ಸಂಬಂಧಿಸಿರುತ್ತದೆ. ನನ್ನ ವಿವಾಹವಾಗಿ 15 ವರ್ಷಗಳಾಗಿದೆ. ನನ್ನ ಪತಿ ಏನು ವಿದ್ಯಾಭ್ಯಾಸ ಮಾಡಿದ್ದರು ಎಂದು ಗೊತ್ತಿಲ್ಲ. ಬೈಕನ್ನು ಸುಮಾರು 7-8 ವರ್ಷಗಳ ಹಿಂದೆ ನನ್ನ ಪತಿ ಖರೀದಿಸಿದ್ದರು. ಸದರಿ ಬೈಕು ನನ್ನ ಪತಿಯ ಹೆಸರಿನಲ್ಲಿಯೇ ಇತ್ತು. ನನ್ನ ಪತಿ ಚಲನಾ ಪರವಾಗಿಯನ್ನು ಹೊಂದಿದ್ದರು. ನನ್ನ ಪತಿಗೆ ಸಂಬಂಧಿಸಿದ ಬೈಕಿಗೆ ವಿಮಾ ಪಾಲಿಸಿ ಇತ್ತು. ಸದರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ಅಪಘಾತದ ನಂತರ ನನ್ನ ಪತಿಯನ್ನು ಚಿತ್ರದುರ್ಗದ ಜಿಲ್ಲಾ ಆಸ್ಪತ್ರೆಗೆ ಸೇರಿಸಿದ್ದರು. ನನ್ನ ಪತಿಯ ತಲೆಗೆ ಪೆಟ್ಟು ಬಿದ್ದು, ಮೃತಪಟ್ಟಿದ್ದರು. ನನ್ನ ಪತಿಯ ತಲೆಗೆ ಹೆಚ್ಚಾಗಿ ಪೆಟ್ಟು ಬಿದ್ದ ಕಾರಣ ಮೃತಪಟ್ಟಿರುತ್ತಾರೆ. ನನ್ನ ಪತಿ ಹೆಲ್ಮೆಟನ್ನು ಧರಿಸಿರಲಿಲ್ಲ. ನಾನು 2 ನೇ ತರಗತಿವರೆಗೆ ವ್ಯಾಸಂಗ ಮಾಡಿದ್ದೇನೆ. ನಿಪಿ-8

ರ ದೋಷಾರೋಪಣ ಪಟ್ಟಿಯಂತೆ ಅಪಘಾತ ನನ್ನ ಪತಿಯ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-8 ರ ದೋಷಾರೋಪಣ ಪಟ್ಟಿಯ ಕುರಿತು ನಾವು ಯಾವುದೇ ಪ್ರಾಧಿಕಾರದಲ್ಲಿ ಪ್ರಶ್ನಿಸಿಲ್ಲ. ಅಪಘಾತ ಪಡಿಸಿದ ಓಮಿನಿ ವಾಹನದ ಸಂಖ್ಯೆ ಹಾಗೂ ಚಾಲಕನ ಹೆಸರು ಗೊತ್ತಿಲ್ಲ. ಅಪಘಾವು ನನ್ನ ಪತಿಯ ತಪ್ಪಿನಿಂದಲೇ ಏರ್ಪಟ್ಟಿರುತ್ತದೆ ಎಂದರೆ ಸರಿಯಲ್ಲ.

2. ಅಪಘಾತವು ಕೆ.ಎ-16-ಎನ್-0053 ರ ಓಮಿನಿ ವಾಹನದ ಚಾಲಕನ ತಪ್ಪಿನಿಂದ ಏರ್ಪಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಪತಿಗೆ ಮೂರು ಜನ ಸಹೋದರಿಯರು. ನಾನು ಹಾಜರುಪಡಿಸಿರುವ ಪಹಣಿಯಲ್ಲಿರುವ ಜಮೀನು ನನ್ನ ಮಾವನಿಗೆ ಸೇರಿದ್ದು ಎಂದರೆ ಸರಿ. ಸದರಿ ಜಮೀನಿನ ಕುರಿತು ನನ್ನ ಮಾವನ ಎಲ್ಲಾ ವಾರಸುದಾರರಿಗೆ ಹಕ್ಕು ಇದೆ ಎಂದರೆ ಸರಿ. ನನ್ನ ಮೃತ ಪತಿ ಅಡಿಕೆ ವ್ಯಾಪಾರ ಮಾಡುತ್ತಿದ್ದ ಬಗ್ಗೆ ಮತ್ತು ವಾರ್ಷಿಕ ಐದು ಲಕ್ಷ ಪಡೆಯುತ್ತಿದ್ದ ಬಗ್ಗೆ ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಪತಿಗೆ ವಾರ್ಷಿಕ ರೂ.5 ಲಕ್ಷ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ಅಪಘಾತದ ಕುರಿತು ನನಗೆ ಖುದ್ದು ಮಾಹಿತಿ ಇಲ್ಲದಿದ್ದಾಗ್ಯೂ, ಪರಿಹಾರವನ್ನು ಪಡೆಯುವ ಸಲುವಾಗಿ ಸುಳ್ಳು ಅರ್ಜಿ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ